ಈ) ಜಿಲ್ಲೆಗಳ ಜನತೆಗೆ ಅನುಕೂಲವಾಗುವ ಈ ಯೋಜನೆಗೆ ಇಲಾಖೆ ಸ್ಪಂದಿಸಲಾಗದೆ ಇರುವ ಕಾರಣಗಳೇನು?

ಶ್ರೀ ಕೆ.ಹೆಚ್.ರಂಗನಾಥ್(ಅರಣ್ಯ,ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):

ಅ) ಬೈಂದೂರಿನಿಂದ ಸಾಗರಕ್ಕೆ ಬೈಂದೂರು-ಗಂಗನಾಡು-ಕಾರ್ನಿ ರಸ್ತೆ ನಿರ್ಮಾಣಕ್ಕೆ ಸಂಬಂಧಿಸಿದಂತೆ ಪ್ರಸ್ತಾವನೆ ಬಂದಿರುವುದು ನಿಜ. ಪ್ರಸ್ತಾಪಿತ ರಸ್ತೆಯ ನಕಾಶೆ, ಹಾದುಹೋಗುವ ಸ್ಥಳದ ವಿವರ, ರಸ್ತೆಯ ಉದ್ದ, ಅಗಲಗಳು ಇತ್ಯಾದಿ ವಿವರಗಳನ್ನು ಮುಂದಿನ ಕ್ರಮ ಕೈಗೊಳ್ಳುವರೇ ಒದಗಿಸಿಕೊಡುವಂತೆ ಲೋಕೋಪಯೋಗಿ ಇಲಾಖೆ, ಕುಂದಾಪುರ ಉಪ ವಿಬಾಗ ಇವರನ್ನು ಕೋರಲಾಗಿದೆ. ಸದರಿ ಇಲಾಖೆಯಿಂದ ಮಾಹಿತಿ ಸ್ವೀಕೃತಿಯಾದ ಕೂಡಲೇ ಕ್ರಮ ಕೈಗೊಳ್ಳಲಾಗುವುದು.

ಆ) ಲೋಕೋಪಯೋಗಿ ಇಲಾಖೆಯಿಂದ ಪ್ರಸ್ತಾಪಿತ ರಸ್ತೆಯ ನಕಾಶೆ, ಹಾದುಹೋಗುವ ಸ್ಥಳದ ವಿವರ, ರಸ್ತೆಯ ಉದ್ದ ಹಾಗೂ ಅಗಲಗಳು ಇತ್ಯಾದಿ ವಿವರಗಳು ಅರಣ್ಯ ಇಲಾಖೆಗೆ ದೊರೆತ ನಂತರವೇ ಈ ಬಗ್ಗೆ ಕ್ರಮ ಕೈಗೊಳ್ಳಬಹುದಾಗಿದೆ.

ಇ) ಅರಣ್ಯ ಸಂರಕ್ಷಣಾ ಕಾಯ್ದೆ 1980 ರನ್ವಯ ಕೇಂದ್ರ ಸರ್ಕಾರದಿಂದ ಅನುಮತಿ ಪಡೆಯಲು ಲೋಕೋಪಯೋಗಿ ಇಲಾಖೆಯಿಂದ ವಿವರಗಳು ಬಂದ ಕೂಡಲೇ ಪ್ರಸ್ತಾವನೆಗಳನ್ನು ಅನುಮೋದನೆಗಾಗಿ ಸಲ್ಲಿಸಲು ಕ್ರಮ ಕೈಗೊಳ್ಳಲಾಗುವುದು.

ಈ) ಅನ್ವಯಿಸುವುದಿಲ್ಲ.

ಮರವಂತೆ ಕಡಲ ತೀರಕ್ಕೆ ಹೊನಲು ಬೆಳಕಿನ ವ್ಯವಸ್ಥೆ

1216(723) ಶ್ರೀ ಗೋಪಾಲ ಪೂಜಾರಿ ಕೆ. (ಬೈಂದೂರು) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮರವಂತೆ ಕಡಲ ತೀರಕ್ಕೆ ಹೊನಲು ಬೆಳಕಿನ ವ್ಯವಸ್ಥೆಗಾಗಿ ಕೇಂದ್ರ ಸರ್ಕಾರದಿಂದ ಮಂಜೂರಾತಿಯಾದ ಮೊಬಲಗು ಎಷ್ಟು?

ಆ) ಈ ಸಂಬಂಧವಾಗಿ ಟೆಂಡರನ್ನು ಕರೆಯಲಾಗಿದೆಯೇ; ಇಲ್ಲವಾದಲ್ಲಿ, ಯಾವಾಗ ಕರೆಯಲಾಗುವುದು?

ಇ) ಈ ಸಂಬಂಧದಲ್ಲಿ ರಾಜ್ಯ ಸರ್ಕಾರದ ಪಾತ್ರವೇನು?

ಈ) ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಆರ್.ವಿ. ದೇಶಪಾಂಡೆ(ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು):

ಅ) ರೂ. 29.54 ಲಕ್ಷಗಳು

ಆ) ಇಲ್ಲ - No

ಈ ಕಾಮಗಾರಿಯನ್ನು ತೋಟಗಾರಿಕೆ ಇಲಾಖೆಯ ಅಧೀನದ ಒಂದು ಸಂಸ್ಥೆಯಿಂದ ಮಾಡಿಸಿಕೊಳ್ಳಲಾಗುತ್ತಿದೆ.

ಇ) ಈ ಯೋಜನೆಗೆ ರಾಜ್ಯ ಸರ್ಕಾರದ ಪಾಲು ರೂ. 10.60 ಲಕ್ಷಗಳು, ಕಾಮಗಾರಿ ಮುಗಿಸಲು ಉಸ್ತುವಾರಿಯನ್ನು ವಹಿಸಿದೆ.

ಈ) ಕೆಲಸ ಪ್ರಗತಿಯಲ್ಲಿದೆ.